(ಇಂದು ದಿನಾಂಕಃ 06–02–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಪ್ರತಿವಾದಿ ಪರ ಃ ಶ್ರೀ ಎಂ ಎಸ್ ಹೆಚ್ ವಕೀಲರಿಂದ -

1) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ ಕಾರಣ ನಾನು ಕಲಿತಿರುವುದಿಲ್ಲ. ವಕೀಲರ ಹೇಳಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

2) ನಾನು ಸೌದತ್ತಿ ಗ್ರಾಮದ ಖಾಯಂ ನಿವಾಸಿ. ಮೃತ ಮಹಾದೇವಿ ನನ್ನ ತಂಗಿಯಾಗಬೇಕು. ಸದರಿಯವರು ಯಾವ ದಿನಾಂಕದಂದು ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಹಾದೇವಿ ರವರನ್ನು ಅಲಗವಾಡಿ ಗ್ರಾಮದ ನಿವಾಸಿಯಾದ ತಿರಕಪ್ಪ ಕಂಕಣ್ಣನವರ ರವರ ಜೊತೆ ವಿವಾಹ ಮಾಡಿ ಕೊಟ್ಟಿರುತ್ತಾರೆ. ಸದರಿಯವರ ವಿವಾಹದ ನಂತರ ಅವರ 1 ವಾರ್ಷದ ದಾಂಪತ್ಯದಿಂದ ರೇಣುಕಾ ಎಂಬ ಮಗು ಹುಟ್ಟಿದ್ದು ಅದು 03 ವರ್ಷದ ನಂತರ ಮರಣ ಹೊಂದಿರುತ್ತದೆ.

3) 2 ಮತ್ತು 3 ನೇ ವಾದಿ ನನ್ನ ತಂಗಿಯಾಗಬೇಕು. 2 ನೇ ವಾದಿ ದಡಿಯರಕೊಪ್ಪ ಗ್ರಾಮದ ಖಾಯಂ ನಿವಾಸಿ. 3 ನೇ ವಾದಿ ಗೊರಗುಡ್ಡಿ ಗ್ರಾಮದ ಖಾಯಂ ನಿವಾಸಿ.

4) ದಾವಾ ಆಸ್ತಿಯ ಸರ್ವೆ ಸಂಖ್ಯೆ ಮತ್ತು ಚಕಬಂದಿ ಹೇಳಲು ಬರುವುದಿಲ್ಲ ಕಾರಣ ನಾನು ಕಲಿತಿಲ್ಲ.ನನ್ನ ತವರೂ ಮನೆಯ ಮನೆತನದ ಹೆಸರು ಕಾಲವಾಡ ಇರುತ್ತದೆ. ಕಾಲವಾಡ ಮತ್ತು ಕಂಕಣ್ಣನವರ ಮನೆತನವು ಬೇರೆ ಬೇರೆ ಎಂದರೆ ಸರಿ.

5) 1 ನೇ ಪ್ರತಿವಾದಿ ಯಾರು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ನನ್ನ ಸಹೋದರಿಯಾದ ಮೃತ ಮಹಾದೇವಿ ರವರ ಗಂಡನ 2 ನೇ ಹೆಂಡತಿ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 2 ರಿಂದ 4 ನೇ ಪ್ರತಿವಾದಿಯರು ನನ್ನ ಸಹೋದರಿಯಾದ ಮೃತ ಮಹಾದೇವಿ ರವರ ಗಂಡನ 2 ನೇ ಹೆಂಡತಿಯ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸದರಿಯವರನ್ನು ದಾವೆಯಲ್ಲಿ ಅವಶ್ಯಕ ಪಕ್ಷಗಾರರಾಗಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ.

6) ಸದರಿ ದಾವೆಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನನ್ನ ಸಹೋದರಿಯಾದ ಮಹಾದೇವಿ ರವರ ವಿವಾಹವು ಯಾವ ಇಸವಿಯಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಮಹಾದೇವಿ ರವರು ತಮ್ಮ ಜೀವಿತ ಅವಧಿಯಲ್ಲಿ ಅಲಗವಾಡಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ಹೆಬ್ಬಾಳ ಗ್ರಾಮದಲ್ಲಿ ವಾಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

7) ಮಹಾದೇವಿ ಮತ್ತು ತಿರಕಪ್ಪ ರವರ ವಿವಾಹದಿಂದ ಜನಿಸಿದ ರೇಣುಕಾ ರವರ ಮರಣ ಹೊಂದಿದ ನಂತರದಲ್ಲಿ ಮಹಾದೇವಿ ರವರಿಗೆ ಸಂತಾನವಾಗದೇ ಇದ್ದ ಕಾರಣ ಮಹಾದೇವಿ ರವರೇ ಸ್ವತಃ ಮುಂದೆ ನಿಂತು ತಿರುಕಪ್ಪ ಮತ್ತು 1 ನೇ ಪ್ರತಿವಾದಿಯ ವಿವಾಹವನ್ನು ತಮ್ಮ ಮನೆತನದ ಹೆಸರನ್ನು ಸಂರಕ್ಷಣೆ ಮಾಡಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

8) ತಿರುಕಪ್ಪ ರವರಿಗೆ ಅಲಗವಾಡಿ ಗ್ರಾಮದಲ್ಲಿ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಅದು ನನ್ನ ತಂದೆಯವರ ಆಸ್ತಿ ಎಂದು ನುಡಿಯುತ್ತಾರೆ. ತಿರುಕಪ್ಪನ ಹೆಸರಿನಲ್ಲಿ ಅಲಗವಾಡಿ ಗ್ರಾಮದಲ್ಲಿ ಆಸ್ತಿಗಳು ಇದ್ದವು ಎಂದರೆ ಸರಿ. ಸದರಿ ಆಸ್ತಿಗಳು ತಿರುಕಪ್ಪ ರವರು ನನ್ನ ತಂಗಿ ಮಹಾದೇವಿಗೆ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಅಲಗವಾಡಿ ಗ್ರಾಮದಲ್ಲಿರುವ ಜಮೀನುಗಳನ್ನು ತಿರುಕಪ್ಪ ಮತ್ತು ಮಹಾದೇವಿ ರವರು ಉಳುಮೆ ಮಾಡುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿಯು ಮಹಾದೇವಿ ರವರಿಗೆ ಯಾವುದೇ ಕೆಲಸ ಬರುತ್ತಿರಲಿಲ್ಲ ಅವರು ಕೇವಲ 01 ವರ್ಷ ಕಾಲ ಒಟ್ಟಿಗೆ ಇದ್ದರು ಎಂದು ನುಡಿಯುತ್ತಾರೆ. 01 ವರ್ಷ ಕಾಲ ಒಟ್ಟಿಗೆ ಇದ್ದರು ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

9) ನಾನು ಸೌದತ್ತಿ ಗ್ರಾಮದ ನಿವಾಸಿಯಾದ ಕಾರಣ ನನ್ನ ಆದಾರ ಕಾರ್ಡಿನಲ್ಲಿ ಸಹ ಅಲ್ಲಿಯ ವಿಳಾಸ ಇರುತ್ತದೆ. ಸಾಮಾನ್ಯವಾಗಿ ವ್ಯಕ್ತಿಯ ವಾಸ್ತವ್ಯವನ್ನು ನೋಡಿ ಆದಾರ ಕಾರ್ಡನ್ನು ನೀಡಲಾಗಿರುತ್ತದೆ ಎಂದರೆ ಸರಿ.

10) ಸಾಕ್ಷಿಗೆ ಈಗ ಒಂದು ಚುನಾವಣೆಯ ಗುರುತಿನ ಚೀಟಿಯನ್ನು ತೋರಿಸಿ, ಸಾಕ್ಷಿಯು ಅದನ್ನು ಪರಿಶೀಲಿಸಿ ನನ್ನ ಸಹೋದರಿ ಮಹಾದೇವಿಯ ಚುನಾವಣೆಯ ಚೀಟಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಚುನಾವಣೆಯ ಚೀಟಿಯನ್ನು ನಿ.ಡಿ.**1** ಎಂದು

ಗುರುತಿಸಲಾಯಿತು. ನಿಡಿ-1 ರಲ್ಲಿ ಮಹಾದೇವಿ ಕಂಕಣ್ಣನವರ ಮತ್ತು ವಿಳಾಸ ಅಲಗವಾಡಿ ಗ್ರಾಮ ಎಂದು ನಮೂದಾಗಿರುತ್ತದೆ ಎಂದರೆ ಸರಿ.

11) ದಾವಾ ಆಸ್ತಿಗಳನ್ನು ತಿರುಕಪ್ಪ ಮತ್ತು 1 ನೇ ಪ್ರತಿವಾದಿಯರು ತಮ್ಮ ಜೀವಿತ ಅವಧಿಯಲ್ಲಿ ದುಡಿಮೆ ಮಾಡಿ ದಾವಾ ಆಸ್ತಿಯ ಉತ್ಪನ್ನದಿಂದ ಮತ್ತು ಡಾಃಬಿ.ಆರ್.ಅಂಬೇಡ್ಕರ ನಿಗಮ ಧಾರವಾಡ ಇವರಲ್ಲಿ ಸಾಲವನ್ನು ಪಡೆದು 1 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಪಡೆದಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿಯನ್ನು ನನ್ನ ತಂದೆಯವರು ಖರೀದಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯವರು ಖರೀದಿ ಪಡೆದುಕೊಂಡಿರುತ್ತಾರೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

12) ದಾವಾ ಆಸ್ತಿಗಳು ತಿರುಕಪ್ಪ ಮತ್ತು 1 ನೇ ಪ್ರತಿವಾದಿಯ ಜೀವಿತಾ ಅವಧಿಯಲ್ಲಿ ಅವರ ಕಬ್ಜಾ ವಹಿವಾಟಿನಲ್ಲಿ ಇದ್ದು ಈಗ ಉಳಿದ ಪ್ರತಿವಾದಿಯರ ಕಬ್ಜಾ ವಹಿವಾಟಿನಲ್ಲಿರುತ್ತದೆ ಅಂದರೆ ಸರಿಯಲ್ಲ. ಈಗ 2 ರಿಂದ 4 ನೇ ಪ್ರತಿವಾದಿಯರು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿರುತ್ತಾರೆ ಎಂದರೆ ಸಾಕ್ಷಿಯು ಅವರು ಮೋಸದಿಂದ ಇರುತ್ತಾರೆ ಎಂದು ನುಡಿಯುತ್ತಾರೆ. ಮೃತ ಮಹಾದೇವಿಗೆ 2 ರಿಂದ 4 ನೇ ಪ್ರತಿವಾದಿಯರು ಸರಳ ವಾರಸುದಾರರಾಗಿದ್ದ ಕಾರಣ ಅವರು ಹೆಸರುಗಳು ದಾಖಲೆಗಳ ಮೇಲೆ ನಮೂದಾಗಿರುತ್ತದೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದು, ಅಂತಿಮ ಸಮಯವಕಾಶ ನೀಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**